**ದಿನಾಂಕಃ 13.11.2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಂ ಓ ಜೆ ವಕೀಲರಿಂದಃ-**

ನನ್ನ ತಂದೆ ಶಿವರುದ್ರೇಗೌಡರನ್ನು ಪಟೇಲ್ ಶಿವರುದ್ರೇಗೌಡ ಎಂಬ ಹೆಸರಿನಿಂದಲೂ ಕರೆಯುತ್ತಾರೆ ಎಂದರೆ ಸರಿ. ನಮ್ಮ ಮನೆಯ ಪೂರ್ವ ಭಾಗಕ್ಕೆ ಪ್ರತಿವಾದಿಯ ಸ್ವತ್ತು ಬರುತ್ತದೆ ಎಂದರೆ ಸಾಕ್ಷಿಯು ಪೂರ್ವಕ್ಕೆ ಗಲ್ಲಿ ಇದ್ದು ನಂತರ ಪ್ರತಿವಾದಿಗಳ ಸ್ವತ್ತು ಇರುತ್ತದೆ ಎಂದು ನುಡಿಯುತ್ತಾರೆ. ಆ ಗಲ್ಲಿಯು ಎರಡೂ ಮನೆಗಳ ನಡುವೆ ಇರುವ ಗಲ್ಲಿ ಎಂದರೆ ಸರಿ. 1 ನೇ ಪ್ರತಿವಾದಿಯು ನಂಜಪ್ಪ ರವರ ಮಗ ಹಾಗೂ 2 ನೇ ಪ್ರತಿವಾದಿ ಮಹದೇವಪ್ಪ ರವರ ಮಗ ಎಂದರೆ ಸರಿ. ನಂಜಪ್ಪ ಮತ್ತ ಮಹದೇವಪ್ಪ ಇಬ್ಬರೂ ಅಣ್ಣ ತಮ್ಮಂದಿರು ಎಂದರೆ ಸರಿ. 1 ನೇ ಪ್ರತಿವಾದಿಯ ತಂದೆ ನಂಜಪ್ಪ ರವರು ದಿಃ 30.03.1960 ರ ಕ್ರಯಪತ್ರದಂತೆ ಬಸಪ್ಪ ಬಿನ್ ಚನ್ನವೀರಪ್ಪ ರವರಿಂದ 9 x 19 ಮೀಟರ್ ಅಳತೆಯ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ರ ದಾಖಲೆ ನನಗೆ ಯಾವುದೇ ನೊಂದಾಯಿತ ದಾಖಲೆ ಆಧಾರದ ಮೇಲೆ ಬಂದಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ-1 ರ ಮೂಲ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೋ ಇಲ್ಲವೋ ನನಗೆ ಗೊತ್ತಿಲ್ಲ. ನಿಪಿ-1 ರ ದಾಖಲೆಯು ದಿಃ 24.08.2017 ರ ದಾಖಲೆ ಎಂದರೆ ಸರಿ. 2017 ರ ಪೂರ್ವದಲ್ಲಿ ನಿಪಿ-1 ರ ಆಸ್ತಿ ನಮ್ಮ ಹೆಸರಿಗೆ ಇತ್ತು ಎಂದು ತೋರಿಸಲು ನೀವು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯ ಸದರಿ ಆಸ್ತಿ ನಮ್ಮ ಹೆಸರಿಗೆ ಇತ್ತು ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಖಾತೆಯು ನನ್ನ ತಂದೆ ಹೆಸರಿಗೆ ಇತ್ತು ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಪಿ-1 ಮತ್ತು 2 ರ ದಾಖಲೆಗಳನ್ನು ಹೊರತುಪಡಿಸಿ ಬೇರೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ದಾವಾ ಆಸ್ತಿಯ ಸ್ವಾದೀನದ ಆಧಾರದ ಮೇರೆಗೆ ದಾವಾ ಆಸ್ತಿಯ ಖಾತೆ ನಮ್ಮ ಹೆಸರಿಗೆ ಬಂದಿರುತ್ತದೆ. ದಾವಾ ಆಸ್ತಿಯ ಖಾತೆ ಈ ಹಿಂದೆ ಯಾರ ಸ್ವಾದೀನದಲ್ಲಿತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ಹಾಜರುಪಡಿಸಲು ಸಾಧ್ಯವಾಗುವುದಿಲ್ಲ.

( ಮುಂದುವರೆದ ಪಾಟೀ ಸವಾಲಿಗಾಗಿ ಸಮಯಕೋರಿದ್ದರಿಂದ ಮುಂದೂಡಲಾಯಿತು )

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.